ಒಂದೂರಿನಲ್ಲಿ ಒಬ್ಬ ಭಿಕ್ಷುಕನಿದ್ದ. ಅವನು ಯಾವಾಗಲೂ ದೇವರ ಗುಡಿಯ ಮುಂದೆ ತನ್ನ ಭಿಕ್ಷಾಪಾತ್ರೆ ಇರಿಸಿ ಕೂತಿರುತ್ತಿದ್ದ, ಗುಡಿಗೆ ಬರುವ ದೈವಭಕ್ತರು ಏನಾದರೂ ಕಾಸು ಹಾಕುತ್ತಾರೆ ಎಂದುಕೊಂಡು. ಕೆಲವರು ಅಲ್ಪಸ್ವಲ್ಪ ಹಾಕುತ್ತಿದ್ದರು, ಹಲವರು ಅವನ ಮುಖ ಕೂಡ ನೋಡದೆ ಹೋಗುತ್ತಿದ್ದರು. ಭಿಕ್ಷುಕ ದಿನವೂ ದೇವರನ್ನು ಶಪಿಸುತ್ತಿದ್ದ. ಒಂದು ದಿನ ಆ ದಾರಿಯಾಗಿ ಒಬ್ಬ ಸನ್ಯಾಸಿ ಬಂದ. ಅವನು ಭಿಕ್ಷುಕನಿಗೆ ಹೇಳಿದ:

"ನೀನು ತಪ್ಪು ಸ್ಥಳದಲ್ಲಿ ಕುಳಿತಿದ್ದೀಯಾ. ಆಮೇಲೆ ದೇವರನ್ನು ಬಯ್ಯುತ್ತೀಯಾ."

"ಇದು ಯಾಕೆ ತಪ್ಪು ಸ್ಥಳ, ಇದು ದೇವರಿರುವ ಸ್ಥಳ ಅಲ್ಲವೇ?"

"ಇಲ್ಲಿಂದ ಸ್ವಲ್ಪ ದೂರದಲ್ಲೊಂದು ಬಾರ್ ಇದೆ, ನೋಡಿದ್ದೀಯಾ?"

"ಹೌದು ಸ್ವಾಮಿ, ನೋಡಿದ್ದೇನೆ."

"ಅಲ್ಲಿ ಹೋಗಿ ಕುಳಿತುಕೋ, ಆಮೇಲೆ ಹೇಳು."

ಸನ್ಯಾಸಿ ಹೇಳಿದಂತೆಯೇ ಭಿಕ್ಷುಕ ಸ್ಥಳ ಬದಲಾಯಿಸಿ ಬಾರಿನ ಎದುರು ಕುಳಿತುಕೊಂಡ. ಬಾರು ತೆರೆಯುತ್ತಿದ್ದುದು ಸಂಜೆ ಆರು ಗಂಟೆಗೆ. ಅಷ್ಟರ ತನಕ ಅವನಿಗೆ ಏನೂ ಹಣ ದೊರಕಲಿಲ್ಲ. ಸನ್ಯಾಸಿಯ ಮಾತು ಕೇಳಿ ತಾನು ಮೋಸಹೋದೆ ಎನಿಸಿತು ಅವನಿಗೆ. ಆದರೆ ಬಾರು ತೆರೆಯುತ್ತಲೇ ಅಲ್ಲಿ ಗಿರಾಕಿಗಳು ಜಮಾಯಿಸಹತ್ತಿದರು. ಮತ್ತು ಕುಡಿದು ತೇಗುತ್ತ ಅಲ್ಲಿಂದ ಹೊರಡುವಾಗ ಅಲ್ಲಿ ಕುಳಿತಿದ್ದ ಭಿಕ್ಷುಕನನ್ನೂ ಅವನ ಭಿಕ್ಷಾಪಾತ್ರೆಯನ್ನೂ ನೋಡಿದರು. ಜೇಬಿನಿಂದ ಹಣ ತೆಗೆದು ಆ ಪಾತ್ರೆಗೆ ಹಾಕಿ ಹೊರಟುಹೋದರು. ಬಾರು ಮುಚ್ಚುವ ವೇಳೆಗೆ ಭಿಕ್ಷುಕನ ಪಾತ್ರೆ ನೋಟುಗಳಿಂದ ತುಂಬಿತು. ಅವನಿಗೆ ಖುಷಿಯೋ ಖುಷಿ. ಸನ್ಯಾಸಿಯ ಮಾತಿನ ನಿಜಾಂಶ ಅವನಿಗೆ ಅರಿವಾಗತೊಡಗಿತು.

"ಓ ದೇವರೇ, ನೀನೆಷ್ಟು ಉದಾರಿ! ಗುಡಿಗಳನ್ನು ನಿರ್ಮಿಸಿದವನೇ ಬಾರುಗಳನ್ನೂ ನಿರ್ಮಿಸಿದಿ! ಸನ್ಯಾಸಿಯ ರೂಪದಲ್ಲಿ ಬಂದು ನನಗೊಂದು ದಾರಿ ಕಾಣಿಸಿದಿ," ಎಂದು ದೇವರಿಗೆ ಕೃತಜ್ಞತೆ ಅರ್ಪಿಸಿದ.

★★★

"ಒಳ್ಳೇ ಕತೆ ಹೇಳಿದಿರಿ, ಸ್ವಾಮಿ!"

"ಆದರೆ ತಾಳಿ, ಅವಸರ ಮಾಡಬೇಡಿ, ಕತೆ ಇಲ್ಲಿಗೆ ಮುಗಿಯಲಿಲ್ಲ, ಇನ್ನೂ ಸ್ವಲ್ಪ ಇದೆ."

"ಹೇಳ್ರಲ್ಲ ಮತ್ತೆ."

"ಏನಾಯಿತೆಂದರೆ, ಅಷ್ಟರಲ್ಲಿ ಬಾರಿನಿಂದ ಕೊನೆಯ ಗಿರಾಕಿಯೊಬ್ಬ ಹೊರಬಿದ್ದ. ಅವನು ಕಂಠಪೂರ್ತಿ ಕುಡಿದಂತೆ ಕಂಡ. ಭಿಕ್ಷುಕನ ಭಿಕ್ಷಾಪಾತ್ರೆಯನ್ನು ನೋಡಿದ್ದೇ ಅವನ ಕಣ್ಣುಗಳು ಆಸೆಯಿಂದ ಅರಳಿದುವು. ಥಟ್ಟನೆ ಅದಕ್ಕೆ ಕೈಹಾಕಿ ಅದರಲ್ಲಿದ್ದ ನೋಟುಗಳೆಲ್ಲವನ್ನೂ ದೋಚಿಕೊಂಡು ತನ್ನ ಜೇಬಿಗೆ ಇಳಿಸಿದ. 'ಚಿಲ್ಲರೆ ನೀನೇ ಇಟ್ಕಂಡಿರು ತಮ್ಮ! ನಾಳೆ ಸಿಗಣ' ಎನ್ನುತ್ತ ಅಲ್ಲಿಂದ ಮಾಯವಾದ!"

❖